ಬೀಜಗಳ ಜೊತೆಗೆ ರೈತರ ಜೀವಗಳು ಕೂಡ. ಕ್ರಿಮಿನಾಶಕ ಕಂಪನಿಗಳು ತಾನು ಜಗತ್ತಿನ ನಂಬರ್ ಒನ್ ಕಂಪನಿಯಾಗುವ ಹಪಾಹಪಿಯಲ್ಲಿ ಇಂಥ ಸಾವಿರಾರು ಜನರನ್ನು ಬಳಸಿಕೊಂಡಿವೆ. ಪ್ರತಿ ಹನ್ನೆರಡು ಗಂಟೆಗೊಬ್ಬ ರೈತನ ಸಾವು, ಅಂಥ ನೂರಾರು ರೈತರ ಹೆಣಗಳ ಮೇಲೆ ಮಾರುಕಟ್ಟೆಯನ್ನು ವಿಸ್ತರಿಸುವ ಯೋಜನೆಗಳು ಅವನ ಆಂತರ್ಯವನ್ನು ನಾಶಗೊಳಿಸಿವೆ. ಇದೆಲ್ಲ ನೆನಪು, ಮತ್ತೆ ಮನುಷ್ಯನಾಗುವ ದಾರಿಗಳನ್ನು ಹುಡುಕುತ್ತಿರುವ ಆತ ದಿಕ್ಕುತಪ್ಪಿ ನಿಂತಿರುವನು.

ಕಥೆಯ ನಾಯಕ ತನಗೆ ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಾನೆ; 'ಬುದ್ಧ ಇವೆಲ್ಲವನ್ನು ಮೀರಿ ಹೇಗೆ ಬೆಳೆದ', 'ಆಮಿಷಗಳನ್ನು, ಆಸೆಗಳನ್ನು ಮೀರಿ ಹೇಗೆ ನಿಂತ', 'ನನಗೆ ಅದೆಷ್ಟು ಆಮಿಷಗಳು'. ಇಂಥ ಪ್ರಶ್ನೆಗಳು ಸಾಂಕೇತಿಕವಾಗಿ ಕಥೆಯಲ್ಲಿ ಬಂದರೂ, ಪ್ರಾಯಶ್ಚಿತ್ತದ ದನಿ ಇಲ್ಲಿನ ಅನೇಕ ಕಥೆಗಳನ್ನು ಆವರಿಸಿಕೊಂಡಿದೆ. ಅಪರಿಮಿತವಾದ ಆಸೆಗಳು, ಅಪರಿಮಿತವಾದ ದುಃಖಗಳನ್ನು ತಂದೊಡ್ಡಿದೆ. ದಾರಿ ಮಾತ್ರ ಕಾಣುತ್ತಿಲ್ಲ. ಬೆಳಕೆಂದುಕೊಂಡದ್ದು ಕತ್ತಲೆಯ ಕೂಪವೆಂದು ಅರಿವಾಗಿದೆ. ಇಂಥ ಅರಿವು ಮೂಡುವ ಹೊತ್ತಿಗೆ ಬದುಕಿನ ಅರ್ಧ ದಾರಿ ಕ್ರಮಿಸಿಯಾಗಿದೆ. ಮುಂದಕ್ಕೂ ಹೋಗಲಾಗದೆ, ಹಿಂದಕ್ಕೂ ಬರಲಾಗದೆ ಮನಸ್ಸು ಅಸ್ವಸ್ಥತೆಯಿಂದ ನರಳುತ್ತಿದೆ.

ಈ ಕಥೆಯು ಒಂದು ತಿರುವು ಕಾಣುವುದು ಆತ ಆನ್‌ಗಾಂಗ್ ಎಂಬ ಹೆಣ್ಣಿನ ಸಹವಾಸಕ್ಕೆ ಬಿದ್ದಾಗ. ಇದನ್ನೂ ಕೂಡ ಕಂಪನಿಯೇ ಆಯೋಜಿಸಿದೆ. ಆಕೆಯ ಕಥೆ ಕೂಡ ಭಿನ್ನವೇನಲ್ಲ. ಅವಳ ಮಾತು, ವರ್ತನೆ ಇವನನ್ನು ತಣ್ಣಗೆ ಕೊರೆಯತೊಡಗಿವೆ. ಈಕೆ ತನ್ನ ಪಾಲಿಗೆ ಏನು ಎಂಬ ಪ್ರಶ್ನೆ ಅವನನ್ನು ಕಾಡತೊಡಗಿದೆ; ಈಕೆ ಸೂಳೆಯೋ? ವ್ಯಾಪಾರಕ್ಕೆ ಮಧ್ಯವರ್ತಿಯೋ? ಕಮಾಡಿಟಿಯೋ? ತತ್ವಜ್ಞಾನಿಯೋ? ಮಾರುಕಟ್ಟೆಯೆಂಬ ಮಾಯಾವಿಯ ಸುತ್ತ ಮಹಾಂತೇಶ ಹೇಳಿರುವ ಈ ಕಥೆ, ಕನ್ನಡದ ಈ ಮೊದಲಿನ ಕಥೆಗಳನ್ನು ಹಿಂದಿಕ್ಕಿ ಬಹುದೂರ ಮುನ್ನಡೆದಿದೆ.

'ಬುದ್ಧ ಗಂಟೆಯ ಸದ್ದು' ಎಂದರೆ ಮನುಷ್ಯರ ಒಳಗಿನ ಎಚ್ಚರ, ಆಂತರ್ಯದ ದನಿ ಎಂಬ ಅರ್ಥವೂ ಇದೆ. ಹೊರಗಿನ ಚಲನೆಗಳೆಲ್ಲವೂ ಆಂತರ್ಯದ ದನಿ ಕಳೆದುಕೊಂಡದ್ದರ ಪರಿಣಾಮ. ಇಲ್ಲಿನ ನಾಯಕ ಯಾವುದನ್ನು ಜೀವನೋಪಾಯದ ಮಾರ್ಗವೆಂದು ತಿಳಿದಿದ್ದನೋ ಅದೀಗ ಜೀವನಾಶದ ಹೆಜ್ಜೆಯಾಗಿಬಿಟ್ಟದೆ. ಇದು ಭೌತಿಕವಾಗಿ ಬೆಳೆದುನಿಂತ ಪರಿ ಗಾಬರಿ ಹುಟ್ಟಿಸುವಂತಿದೆ. ಬಂಡವಾಳದ ಸಾಮ್ರಾಜ್ಯ ವಿಸ್ತರಣೆ ರೈತರ ಬಲಿ ಕೇಳುತ್ತಿದೆ. ಅಂಥ ಬಲಿಗೆ ಮಧ್ಯವರ್ತಿಗಳಾಗಿ ವ್ಯಾಪಾರಸ್ಥರೂ, ವಿಜ್ಞಾನಿಗಳೂ ಇದ್ದಾರೆ. ಬಂಡವಾಳದ ವಿಸ್ತರಣೆಗೆ ಅನುಕೂಲಕರವಾದ ಕ್ರಿಯಾಯೋಜನೆಯ ಭಾಗವಾಗಿದ್ದಾರೆ. ಇದರ ಪರಿಣಾಮಗಳು ಇಲ್ಲಿನ ಪಾತ್ರಗಳನ್ನು ಜರ್ಝರಿತಗೊಳಿಸಿವೆ. ಲೋಕದ ಇಂಥದ್ದೊಂದು ಸ್ಥಿತಿಯನ್ನು ಕಥೆಗಳು ಹೇಳತೊಡಗಿವೆ. ಅವರ ಕಥೆಗಳು ಹೊರ ಮತ್ತು ಒಳಲೋಕಗಳನ್ನು ಏಕಕಾಲಕ್ಕೆ ಕಾಣಿಸಲು ಯತ್ನಿಸುತ್ತಿರುವುದರಿಂದ ಒಂದು ನಿಗೂಢ ಸೌಂದರ್ಯವನ್ನೂ ದಕ್ಕಿಸಿಕೊಂಡಿವೆ.

ಅವರ ಉಳಿದ ಅನೇಕ ಕಥೆಗಳು 'ಬುದ್ಧ ಗಂಟೆಯ ಸದ್ದು' ಕಥೆಯ ಉಪ ಅಲೆಗಳಂತಿವೆ. 'ಉರಿಯ ನಡಿಗೆ', 'ಧರಣಿಯ ಮೇಲೆ ದಾಳಿ', 'ಈ ಭೂಮಿ ನಿನ್ನದಲ್ಲ', 'ಭವಬೀಜದ ಹಿಂದೆ' ಕಥೆಗಳು ವಿಜ್ಞಾನ ಮತ್ತು ಮಾರುಕಟ್ಟೆಯ ಅನೈತಿಕ ಒಪ್ಪಂದವನ್ನು ಹೇಳುತ್ತಿವೆ. 'ಉರಿಯ ನಡಿಗೆ' ಕಥೆ ಇದೇ ತಳಮಳವನ್ನು ವಿಜ್ಞಾನಿಯೊಬ್ಬನ ಸುತ್ತ ಹೆಣೆದಿದೆ. ಕಥೆಯ ತಂತ್ರ ಭಿನ್ನವಾದದ್ದು. ವಿಜ್ಞಾನಿ ಮತ್ತು ಪೂಜಾರಿಯ ಮುಖಾಮುಖಿಯಲ್ಲಿ ಕಥೆ ಬಿಚ್ಚಿಕೊಂಡಿದೆ. ವಿಜ್ಞಾನಿಗೆ ಮೈಯೆಲ್ಲಾ ಉರಿ ರೋಗ ಆವರಿಸಿದೆ. ಎಲ್ಲಿ ಹೋದರೂ ರೋಗ ವಾಸಿಯಾಗುತ್ತಿಲ್ಲ. ಹೆಂಡತಿ ಅನುಸೂಯಮ್ಮ ವಿಜ್ಞಾನಿಯಾಗಿರುವ ತನ್ನ ಗಂಡನನ್ನು ಗುಣಪಡಿಸಲು ಪೂಜಾರಿಯ ಹತ್ತಿರ ಕರೆದುಕೊಂಡು ಬಂದಿರುವಳು. ಆತ ಮೈಯೆಲ್ಲಾ ಉರಿ ಉರಿ ಎಂದು ನರಳುತ್ತಿದ್ದಾನೆ. ಈ ಉರಿ ಆತನ ದೇಹದ್ದೂ ಹೌದು, ಮನಸ್ಸಿನದೂ ಹೌದು. ಈ ಮನೋರೋಗಕ್ಕೆ ಮುಖ್ಯ ಕಾರಣ